**ದಿನಾಂಕ 29.07.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

ಪಾಟೀ ಸವಾಲು: ವಾದಿ ಪರ ಶ್ರೀ ಕೆ ವಿ ಬಿ ವಕೀಲರಿಂದ

**7.** ನೆರಳಕಟ್ಟೆಯಲ್ಲಿರುವ ನಮ್ಮ ಮನೆಗೆ ಪರ್ಣ ಕುಟೀರ ಎಂದು ಹೆಸರು ಇದೆ ಎಂದರೆ ಸಾಕ್ಷಿಯು ನಾವು ಕರೆಯುವುದಿಲ್ಲ, ಆದರೆ ಊರಿನವರು ಕರೆಯುತ್ತಾರೆ ಎನ್ನುತ್ತಾರೆ . ಆಮಂತ್ರಣ ಪತ್ರಿಕೆಯಲ್ಲಿ ಪರ್ಣ ಕುಟೀರ ಎಂದು ನಮೂದು ಮಾಡಿದ್ದಿರಾ ಎಂದರೆ ಇಲ್ಲ ಎನ್ನುತ್ತಾರೆ . ಮೂರನೇ ಪ್ರತಿವಾದಿ ಶಾರದ ಮೂರ್ತಿ ಅವರ ಮದುವೆ **1966** ರಲ್ಲಿ ಆಗಿದೆ ಎಂದರೆ ಸರಿ . ಅವಳ ಮದುವೆ ಸಾಲ ಮಾಡಲಾಗಿತ್ತು ಎಂದರೆ ಸರಿಯಲ್ಲ . ಅವಳ ಮದುವೆಯ ಖರ್ಚು ವೆಚ್ಚಗಳನ್ನು ತಂದೆಯವರು ಮಾಡಿರುತ್ತಾರೆ . ಅವಳ ಮದುವೆಗೆ ನನ್ನ ತಂದೆಯ ಹತ್ತಿರ ಸಾಕಷ್ಟು ಹಣ ಇರಲಿಲ್ಲ ಆದ್ದರಿಂದ ವಾದಿಯರು ಮತ್ತು ಎಲ್ಲರೂ ಸೇರಿಕೊಂಡು ಸಾಲ ಮಾಡಿ ಮೂರನೇ ಪ್ರತಿವಾದಿಯ ಮದುವೆಯನ್ನು ಮಾಡಲಾಗಿತ್ತು ಎಂದರೆ ಸರಿಯಲ್ಲ . ನನ್ನ ಕಲಿಕೆಯ ಖರ್ಚು ವೆಚ್ಚಗಳನ್ನುಒಂದನೇ ವಾದಿ ಮಾಡಿದ್ದು ಎಂದರೆ ಸರಿಯಲ್ಲ . ನಾನು ನಾಲ್ಕು ಜನರ ಕೈಯಲ್ಲಿ ಹಣವನ್ನು ಕೇಳಿ ಶಾಲೆಯನ್ನು ಕಲಿತಿರುತ್ತೇನೆ . ಸಾಯಕೃಷ್ಣ ಭಟ್ , ಮರಕಿಣಿ ಸುಬ್ರಯಾ ಭಟ್ , ಬೇರೆಯವರ ಹೆಸರು ನೆನಪಿಲ್ಲ . ನಾನು ಸಾಲವನ್ನು ಕೇಳಿ ಶಾಲೆಯನ್ನು ಕಳಿತಿಲ್ಲ , ಶಾಲಾ ಖರ್ಚನ್ನು ಒಂದನೇ ವಾದಿ ಮತ್ತು ಪ್ರತಿವಾದಿ ನಂಬ್ರ **1** ರವರು ನೋಡಿಕೊಂಡಿದ್ದರು ಎಂದರೆ ಸರಿಯಲ್ಲ . **1962-1964** ರಲ್ಲಿ ಮಣಿಪಾಲ ಇಂಜಿನಿಯರಿಂಗ್ ಕಾಲೇಜಿನಲ್ಲಿ ಆಗಿ ಖಾಯಂ ಆಗಿ ಕೆಲಸ ಮಾಡುತ್ತಿದ್ದಿರಾ ಎಂದರೆ, ಸಾಕ್ಷಿಯು ಹೌದು ಎನ್ನುತ್ತಾರೆ . ಆ ಬಗ್ಗೆ ದಾಖಲೆಗಳು

ಈಗ ನನ್ನ ಕೈಯಲ್ಲಿ ಇಲ್ಲ . ನಾನು ಮಣಿಪಾಲ ಕಾಲೇಜಿನಲ್ಲಿ **1962-1964** ರಲ್ಲಿ ಖಾಯಂ ಆಗಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು **1964**ರಲ್ಲಿ ಸ್ವ ಇಚ್ಛೆಯಿಂದ ಕೆಲಸವನ್ನು ಬಿಟ್ಟು **M.Sc** ಉನ್ನತ್ತ ವ್ಯಾಸಂಗವನ್ನು ಮಾಡಿದ್ದೇನೆ . ಎರಡು ವರ್ಷದವರೆಗೆ **M.Sc** ಯನ್ನು ಓದಿದ್ದೇನೆ . **M.Sc** ಓದಲು **1**ನೇ ವಾದಿ ಮತ್ತು **1**ನೇ ಪ್ರತಿವಾದಿ ಹಣಕಾಸಿನ ಸಹಾಯವನ್ನು ನನಗೆ ಮಾಡಿದ್ದರು ಎಂದರೆ ಸರಿಯಲ್ಲ . ಹಣದ ಸಹಕಾರವನ್ನು ನೀಡಿದ್ದರೂ ಅದನ್ನು ಮರೆಮಾಚಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

**8.** ಮೂಲ್ಕಿಯಲ್ಲಿ ಇರಬೇಕಾದರೆ ನಾನು ಮತ್ತು ನನ್ನ ಅಣ್ಣ ಜೊತೆಯಾಗಿ ಇದ್ದೇವು ಎಂದರೆ ಸಾಕ್ಷಿಯು ನಾನು ನನ್ನ ಅಣ್ಣ ಮತ್ತು ಬೇರೆ ಎರಡು ಜನ ಸೇರಿಕೊಂಡು ಇದ್ದೇವು ಎನ್ನುತ್ತಾರೆ . **1**ನೇ ವಾದಿ **1959** ಎಂ ಜಿ ಎಂ ಕಾಲೇಜಿನಲ್ಲಿ ಪ್ರಾಧ್ಯಪಕರಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಅವರು ಏನು ಪ್ರಾಧ್ಯಪಕರೋ ಅಥವಾ ಟ್ಯೂಟರ್ ಆಗಿ ಕೆಲಸ ಮಾಡುತ್ತಿದ್ದರಾ ಎಂದು ನನಗೆ ಗೊತ್ತಿಲ್ಲ . **1**ನೇ ವಾದಿ ಪುತ್ತೂರು ಸೈಂಟ್ ಫಿಲೋಮಿನಾ ಕಾಲೇಜಿಗೆ ಉಪನ್ಯಾಸಕರಾಗಿ **1962** ರಲ್ಲಿ ಸೇರಿದ್ದರು ಎಂದರೆ ಸಾಕ್ಷಿಯು ನನಗೆ ಇಸವಿ ನೆನಪಿಲ್ಲ ಆದರೆ ಕೆಲಸಕೆ ಸೇರಿದ್ದರು ಎನ್ನುತ್ತಾರೆ . ಅಲ್ಲಿ ಅವರು ಬಾಡಿಗೆ ಮನೆ ಮಾಡಿ ಮೂರನೇ ಪ್ರತಿವಾದಿಗೆ ವಿಧ್ಯಾಭ್ಯಾಸವನ್ನು **1**ನೇ ವಾದಿಯೇ ನೀಡಿದ್ದರು ಎಂದರು ಸರಿಯಲ್ಲ . **4**ನೇ ವಾದಿ ಅಡ್ಯನಡ್ಕದಲ್ಲಿ ಎಷ್ಟನೇ ಇಸವಿಯವರೆಗೆ

ಶಾಲೆಗೆ ಹೋಗುತ್ತಿದ್ದರು ಎಂದು ನನಗೆ ನೆನಪಿಲ್ಲ . 4ನೇ ವಾದಿ ಪುತ್ತೂರಿನ **Convent** ಶಾಲೆಗೆ ಹೋಗುತ್ತಿದ್ದಾರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ . 1ನೇ ವಾದಿ ಮೂಲ್ಕಿ ಕಾಲೇಜಿಗೆ **1963** ರಲ್ಲಿ ಸೇರಿದ್ದರು ಎಂದರೆ ಸಾಕ್ಷಿಯು **1963** ಅಥವಾ **1964** ಎಂದು ನನಗೆ ನೆನಪಿಲ್ಲ ಎನ್ನುತ್ತಾರೆ .

**9.** ನನ್ನ ತಂದೆಯ ಎರಡನೇ ಹೆಂಡತಿಯ ಮಕ್ಕಳ ಎಲ್ಲಾ ಜವಬ್ದಾರಿಗಳನ್ನು ಒಂದನೇ ವಾದಿ ವಹಿಸಿಕೊಂಡಿದ್ದರು ಎಂದರೆ ಸರಿಯಲ್ಲ . ನನ್ನ ಹೆಸರಿಗೆ ದಾವ ಆಸ್ತಿಗಳನ್ನು ಖರೀದಿ ಮಾಡಿದ್ದು ವಾದಿಯರು ಮತ್ತು ಪ್ರತಿವಾದಿಗಳು ಕೂಡಿಕೊಂಡು ಮಾಡಿದ್ದು ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ನನ್ನ ಸ್ವಂತ ದುಡಿಮೆಯಿಂದ ನಾನು ಖರೀದಿ ಮಾಡಿದ್ದು ಎನ್ನುತ್ತಾರೆ . ಆ ರೀತಿ ಖರೀದಿ ಮಾಡಲು ಹಣದ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ . ದಾವ ಆಸ್ತಿ ಖರೀದಿ ಮಾಡುವುದಕ್ಕಿಂತ ಮೊದಲು ದಿನಾಂಕ **10-05- 1967** ರಂದು ಶಾಂಭವಿ ಆಳ್ವ ಎನ್ನುವವರು ಮೂರನೇ ಪ್ರತಿವಾದಿ ಕ್ರಯ ಪತ್ರದ ಕುರಿತು ಒಂದು ಕರಾರು ಪತ್ರವನ್ನು ಮಾಡಿಕೊಂಡಿದ್ದರು ಎಂದರೆ ಸಾಕ್ಷಿಯು ನನಗೆ ಸ್ಪಷ್ಟವಾಗಿ ಗೊತ್ತಿಲ್ಲ ಎನ್ನುತ್ತಾರೆ . ಶಾಂಭವಿ ಆಳ್ವ ಎನ್ನುವವರು ಮೂರನೇ ಪ್ರತಿವಾದಿ ಅವರು ಮಾಡಿಕೊಂಡ ಕರಾರು ಪತ್ರದ ಬಗ್ಗೆ ನನ್ನ ಖರೀದಿ ಪತ್ರದಲ್ಲಿ ನಮೂದು ಮಾಡಿದ್ದರಾ ಎನ್ನುವ ಬಗ್ಗೆ ನನಗೆ ಅನುಭವ ಇಲ್ಲ. ನಿಪಿ-**3** ನ್ನು ಬರೆಯಲಿಕ್ಕೆ ಅನುಭವವನ್ನು ನಾನೇ ಕೊಟ್ಟಿರುತ್ತೇನೆ . ಶಾಂಭವಿ ಇವರು ನಿಪಿ-**3** ನ್ನು ಬರೆಯಲು ಅನುಭವವನ್ನು ಕೊಟ್ಟಿಲ್ಲ . ಮೂರನೇ

ಪ್ರತಿವಾದಿಯ ಮತ್ತು ಶಾಂಭವಿ ಇವರ ನಡುವೆ ಆದ ಕರಾರು ಪತ್ರದ ಅವಧಿಯ ಮಧ್ಯದಲ್ಲಿ ನನ್ನ ಮತ್ತು ಶಾಂಭವಿ ನಡುವೆ ಮೌಖಿಕ ಕರಾರು ಆಗಿತ್ತು ಎನ್ನುತ್ತಾರೆ . ಶಾಂಭವಿಗೆ ನಾನು ಕರಾರು ಪತ್ರಕ್ಕೆ ಸಂಬಂಧಪಟ್ಟಂತೆ ಹಣ ನೀಡಿಲ್ಲ . ಶಾಂಭವಿ ಆಳ್ವ ಎನ್ನುವವರು ಮೂರನೇ ಪ್ರತಿವಾದಿ ನಡುವೆ ಕರಾರು ಪತ್ರ ಮಾಡಿಕೊಂಡಿದ್ದ ಬಗ್ಗೆ ನನಗೆ ಸ್ಪಷ್ಟತೇ ಇಲ್ಲ ನಾನು ಆ ಬಗ್ಗೆ ಯಾವತ್ತೂ ಕೇಳಿಲ್ಲ . ಶಾಂಭವಿ ಆಳ್ವ ಎನ್ನುವವರು ಮೂರನೇ ಪ್ರತಿವಾದಿ ನಡುವೆ ಆದ ಕರಾರು ಪತ್ರದ ಬಗ್ಗೆ ನನ್ನ ತಾಯಿ ಹೇಳಿದ್ದನು ನಾನು ಕೇಳಿದ್ದೇನೆ . ಮೂರನೇ ಪ್ರತಿವಾದಿಗೆ ಹಣದ ಅಡಚಣೆ ಇದ್ದ ಬಗ್ಗೆ ನನಗೆ ಗೊತ್ತಿಲ್ಲ . ಮೂರನೇ ಪ್ರತಿವಾದಿಗೆ ವೈಯಕ್ತಿಕ ಕಷ್ಟಗಳು ಮತ್ತು ಅಡಚಣೆ ಇತ್ತಾ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ . ಈ ಬಗ್ಗೆ ನಾನು ಎಲ್ಲಿಯೂ ಹೇಳಿಲ್ಲ . ಮೂರನೇ ಪ್ರತಿವಾದಿಯ ಕರಾರಿನ ಹಣ ರೂ .750/-ನ್ನು ಎಲ್ಲರೂ ಸೇರಿಕೊಂಡು ಕೊಟ್ಟಿದ್ದು ಎಂದರೆ ಸರಿಯಲ್ಲ . ಈ ವಿಷಯ ನನಗೆ ಗೊತ್ತಿದ್ದರೂ ಕೂಡ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಅಡ್ಯನಡ್ಕದಲ್ಲಿ ವೈಯುಕ್ತಿಕ ಮನೆ ಇಲ್ಲದ ಕಾರಣದಿಂದ ಪೆರಾಜೆ ಗ್ರಾಮದ ನೇರಳಕಟ್ಟೆಯಲ್ಲಿ ಸಮಷ್ಟಿ ಫಂಡಿನಿಂದ ದಾವ ಆಸ್ತಿಗಳನ್ನು ಖರೀದಿ ಮಾಡಿದ್ದು ಎಂದರೆ ಸರಿಯಲ್ಲ . ಮೂರನೇ ಪ್ರತಿವಾದಿಗೆ ದಾವ ಆಸ್ತಿಯನ್ನು ಅಗ್ರಿಮೆಂಟ್ ಮೂಲಕರ ಖರೀದಿ ಮಾಡಲು ಕಷ್ಟ ಆದ ಕಾರಣ ನನ್ನ ಹೆಸರಿನಲ್ಲಿ ದಾವ ಆಸ್ತಿಗಳನ್ನು ಕುಟುಂಬದ ಸಮಷ್ಟಿ ಫಂಡಿನಿಂದ ಖರೀದಿ ಮಾಡಲಾಗಿತ್ತು ಎಂದರೆ ಸರಿಯಲ್ಲ . ನಮ್ಮ ಕುಟುಂಬದ ಸಂಪೂರ್ಣ

ಯಾಜಮಾನಿಕೆ ಒಂದನೇ ವಾದಿಯ ಕೈಯಲ್ಲಿ ಇತ್ತು ಎಂದರೆ ಸರಿಯಲ್ಲ . ಕ್ರಯ ಪತ್ರವನ್ನು ಒಂದನೇ ವಾದಿ ಕೊಚ್ಚಿನ್ ಗೆ ಹೋದ ಕಾರಣ ನನ್ನ ಹೆಸರಿನಲ್ಲಿ ದಾವ ಆಸ್ತಿಗಳನ್ನು ಖರಿದಿ ಮಾಡಲಾಗಿತ್ತು ಎಂದರೆ ಸರಿಯಲ್ಲ . ಮೂರನೇ ಪ್ರತಿವಾದಿಯ ಗಂಡ ರಾಮ ಮೂರ್ತಿ ಶಾಂಭವಿ ಆಳ್ವ ರವರೊಂದಿಗೆ ಮಾಡಿದ ಕಾರಾರು ಪತ್ರವನ್ನು ರದ್ದು ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ . ನಿಪಿ-**3**ಕ್ಕೆ ಮೊದಲು ಶಾಂಭವಿ ಆಳ್ವ ಇವರೊಂದಿಗೆ ನಾನು ಕರಾರು ಮಾಡಿಕೊಂಡ ಬಗ್ಗೆ ನ್ಯಾಯಾಲಯಕ್ಕೆ ನಾನು ತಿಳಿಸಿಲ್ಲ . ಆ ರೀತಿ ನಾನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿದ್ದರೆ ಅದು ಸುಳ್ಳು . ದಾವ ಆಸ್ತಿಗಳನ್ನು ರೂ. **3000/-**ಕ್ಕೆ ಖರೀದಿ ಮಾಡಿದ್ದೇನೆ . ಖರೀದಿ ಮಾಡಲು ನಾನೇ ಹಣ ಕೊಟ್ಟಿದ್ದು ಎಂದು ತೋರಿಸಲು ದಾಖಲೆ ಇಲ್ಲ . ಸಾಕ್ಷಿಯು ಮುದುವರಿದು ಮೂಲ್ಕಿಯ ಸಿಂಡಿಕೇಟ್ ಬ್ಯಾಂಕಿನಿಂದ **Self Cheque** ಮುಖಾಂತರ ಹಣ ಡ್ರಾ ಮಾಡಿ ಕೊಟ್ಟಿದ್ದೇ ನೆ ಎನ್ನುತ್ತಾರೆ . ನಾನು **Self Cheque** ಮುಖಾಂತರ ಹಣ ಡ್ರಾ ಮಾಡಿಕೊಂಡಿರಲಿಲ್ಲ ಎಂದರೆ ಸರಿಯಲ್ಲ . ನಾನು ಪ್ರಮಾಣ ಪತ್ರದಲ್ಲಿ ಹೇಳಿದಂತೆ ನನಗೆ ಅಷ್ಟು ಸಂಪಾದನೆ ಇರಲಿಲ್ಲ ಎಂದರೆ ಸರಿಯಲ್ಲ . ಸಾಕ್ಷಿ ಮುಂದುವರಿದು ನನಗೆ ಸಂಪಾದನೆ ಇತ್ತು ಎನ್ನುತ್ತಾರೆ . ಖರೀದಿ ಮಾಡುವ ಸಮಯದಲ್ಲಿ ನಾನು ಖಾಯಂ ಪ್ರಧ್ಯಾಪಕರಾಗಿ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ . ದಾವ ಆಸ್ತಿಯನ್ನು ಖರೀದಿ ಮಾಡಿದ ಸಮಯದಲ್ಲಿ ಒಂದು ಚಿಕ್ಕ ಮನೆ , ಹಲಸಿನ ಮರ, ಎರಡು ತೆಂಗಿನ ಮರ ಇತ್ತು . ಆ ಚಿಕ್ಕ ಮನೆಯಲ್ಲಿ ನಾನು ವಾಸ್ತವ್ಯ ಮಾಡಿದ್ದೆ . ಆ ಚಿಕ್ಕ ಮನೆಯಲ್ಲಿ ತಾಯಿ ಮತ್ತು ನನ್ನ ಅಣ್ಣ ತಮ್ಮಂದಿರು ಯಾರು

ಬಂದಿರಲಿಲ್ಲ , ನಾನು ಒಬ್ಬನೇ ವಾಸವಾಗಿದ್ದೆ . **1968** ರಲ್ಲಿ ನನ್ನ ತಂದೆ ತಾಯಿಯವರು ನನ್ನ ಜೊತೆ ಬಂದಿರುತ್ತಾರೆ . ವಾದಿ ನಂಬ್ರ **2** ರಿಂದ **5**ನೇದ್ದವರು ನನ್ನ ತಂದೆ ತಾಯಿಯೊಂದಿಗೆ ಅವರು ಬಂದಿರಲಿಲ್ಲ . ವಾದಿಯವರು ದಾವ ಆಸ್ತಿಯಲ್ಲಿ ಎಷ್ಟನೇ ಇಸವಿಯಲ್ಲಿ ವಾಸವಾಗಿದ್ದರು ಎಂದು ನನಗೆ ನೆನಪಿಲ್ಲ . ಕ್ರಯ ಚೀಟು ಆದ ನಂತರ ತಂದೆ , ತಾಯಿ ಮತ್ತು ವಾದಿಯರು ದಾವ ಮನೆಗೆ ಬಂದು ವಾಸವಾಗಿದ್ದರು ಎಂದರೆ ಸರಿಯಲ್ಲ . ನನ್ನ ತಂದೆಯ ಎರಡನೇ ಹೆಂಡತಿಯ ಮಕ್ಕಳು ದಾವ ಮನೆಗೆ ಬಂದು ವಾಸ್ತವ್ಯ ಮಾಡಿರುವುದಿಲ್ಲ . ದಾವ ಆಸ್ತಿಯಲ್ಲಿ ಟೇಲಿಫೋನ್ ಸಂಪರ್ಕ ನಮ್ಮ ಮನೆಗೆ ಇರಲಿಲ್ಲ . ವಾದಿಯರು ಹಾಜರುಪಡಿಸಿದ ದಾಖಲೆಗಳನ್ನು ನಾನು ಪರಿಶೀಲಿಸಿಲ್ಲ . ದಾವ ಆಸ್ತಿಯಲ್ಲಿರುವ ಕದ ನಂಬ್ರ ಈಗ ನನಗೆ ನೆನಪಿಲ್ಲ . ಮನೆ ತೆರಿಗೆಯನ್ನು ಕಟ್ಟುತ್ತಿದ್ದು ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಬಹುದು .

**10.** ಪೇರಾಜೆ ಗ್ರಾಮದ ನೇರಳಕಟ್ಟೆಯಲ್ಲಿ ದಾವ ಮನೆಯನ್ನು ಹೊರತುಪಡಿಸಿ ನನ್ನ ಸಹೋದರ ಮತ್ತು ಸಹೋದರಿಯರಿಗೆ ಬೇರೆ ಮನೆ ಇರುವುದಿಲ್ಲ . ಡಾ. ಎ ಎನ್ ಭಟ್ **S/o** ಎ ಟಿ ಭಟ್ ಎಂದರೆ ನಾಲ್ಕನೇ ವಾದಿ ಎಂದರೆ ನನ್ನ ತಮ್ಮ . ಈಗ ಸಾಕ್ಷಿಗೆ ನಿಪಿ-**62** ದಾಖಲೆಯನ್ನು ತೋರಿಸಲಾಗಿ ಅದರಲ್ಲಿ ಡಾ. ಎ ಎನ್ ಭಟ್ ಎಂದು ನಮೂದಿಸಲಾಗಿದೆ ಎಂದರೆ ಸರಿ . ಡಾ. ಎ ಎನ್ ಭಟ್ ಅವರ ಹೆಸರಿಗೆ ಇರುವ ಟೆಲಿಫೋನ್ ನಂಬ್ರ ನನಗೆ ನೆನಪಿಲ್ಲ . ಸಾಕ್ಷಿ ಮುಂದುವರಿದು ಅವರಿಗೆ ಟೆಲಿಫೋನ್ ನಂಬ್ರ ಇದ್ದ ಬಗ್ಗೆ ನಾನು ಕೇಳಲಿಕ್ಕೆ ಕೂಡ ಹೋಗಿಲ್ಲ . **274 170** ಈ ಟೇಲಿಫೋನ್ ನಂಬ್ರ ಪರ್ಣ ಕುಟೀರ ಮನೆಗೆ ಸೇರಿದ್ದು ಎಂದರೆ ಸರಿಯಲ್ಲ . ದಾವ ಸ್ವತ್ತಿನಲ್ಲಿರುವ ಮನೆಗೆ ನಾನು ಯಾವತ್ತೂ

ಟೇಲಿಫೋನ್ ಸಂಪರ್ಕವನ್ನು ಪಡೆದುಕೊಂಡಿಲ್ಲ . ಒಂದನೇ ವಾದಿಗೆ ಮನೆಯಲ್ಲಿ ಪುಟ್ಟಣ್ಣ ಎಂದು ಕರೆಯುತ್ತೇವೆ ಎಂದರೆ ಸರಿ . ಮೂರನೇ ವಾದಿ ಮಹಾಬಲೇಶ್ವರಿಗೆ ಮಪಾಲ ಎಂದು ಕರೆಯುತ್ತೇವೆ ಎಂದರೆ ಸರಿ . ನಾನು ಮೂಲ್ಕಿಯಲ್ಲಿ ಇರುವಾಗ ಅಥವಾ ಬೇರೆ ಕಡೆ ಕೆಲಸದಲ್ಲಿರುವಾಗ ತಾಯಿಗೆ ಪತ್ರ ವ್ಯವಹಾರಗಳನ್ನು ಮಾಡುತ್ತಿದ್ದೆ. ದಾವ ಆಸ್ತಿಯಲ್ಲಿರುವ ಮನೆಯ ಕದ ನಂಬ್ರ **1-99** ಎಂದರೆ ನನಗೆ ನೆನಪಿಲ್ಲ ಎನ್ನುತ್ತಾರೆ . ದಾವ ಆಸ್ತಿಗೆ ಸಂಬಂಧಪಟ್ಟ ಮನೆಯ ನಂಬ್ರನ್ನು ತೋರಿಸಲು ನನ್ನ ಹತ್ತಿರ ದಾಖಲೆ ಇಲ್ಲ . ಸಾಕ್ಷಿಗೆ ನಿಪಿ-**64** ದಾಖಲೆ ತೋರಿಸಲಾಗಿ ಅದರಲ್ಲಿ ನಮೂದಿಸಿದ ಲಕ್ಷ್ಮೀ ಅಮ್ಮ ಎ ಎಂದರೆ ನನ್ನ ತಾಯಿ . ನಿಪಿ-**64** ರಲ್ಲಿ ತೋರಿಸಲಾದ ದಾವ ಆಸ್ತಿಯಲ್ಲಿರುವ ಮನೆ ಕದ ನಂಬ್ರ **1-99** ಎಂದರೆ ಸರಿ . ಮೂರನೇ ವಾದಿ ಮತ್ತು ನನಗೆ ದಾವ ಪೂರ್ವದಲ್ಲಿ ಯಾವುದೇ ಮನಸ್ತಾಪ ಇರಲಿಲ್ಲ . ಮಾರನೇ ವಾದಿ ದಾವ ಆಸ್ತಿಯ ಮನೆಯಲ್ಲಿ ಯಾವಾಗ ವಾಸ್ತವ್ಯದಲ್ಲಿ ಇದ್ದರು ಎಂದು ನನಗೆ ನೆನಪಿಲ್ಲ . ಸಾಕ್ಷಿಗೆ ನಿಪಿ-**63** ದಾಖಲೆ ತೋರಿಸಲಾಗಿ ಅದರಲ್ಲಿ ನಮೂದಿಸಿದ ಎ ಮಹಾಬಲೇಶ್ವರ ಎಂದರೆ ಮೂರನೇ ವಾದಿ ನನ್ನ ಸಹೋದರ . ದಾವ ಆಸ್ತಿಯಲ್ಲಿರುವ ಮನೆ ಕದ ನಂಬ್ರ ವರ್ಷ ವರ್ಷ ಏನಾದರೂ ಬದಾಲಗಿತ್ತಾ ಎಂದರೆ ಸಾಕ್ಷಿಯು ಒಂದೇ ನಂಬ್ರ ಇದೆ ಎನ್ನುತ್ತಾರೆ . ಸಾಕ್ಷಿಗೆ ನಿಪಿ-**65** ದಾಖಲೆ ತೋರಿಸಲಾಗಿ ಅದರಲ್ಲಿ ನಮೂದಿಸಿದ ಪಾರ್ವತಿ ಭಟ್ ಎಂದರೆ ಮೂರನೇ ವಾದಿಯ ಹೆಂಡತಿ . ಅದರಲ್ಲಿ ಕೂಡ ಕದ ನಂಬ್ರ **1-99** ಎಂದರೆ ಸರಿ . ಈ ರೀತಿ ವಿಳಾಸ ತೋರಿಸಿದ ನಿಪಿ-**63** ಮತ್ತು ನಿಪಿ-**65** ಚುನವಣಾ ಬಾವಚಿತ್ರಗಳನ್ನು ಮಾಡುವ ಸಮಯದಲ್ಲಿ ನಾನು ಆಕ್ಷ್ಯೇಪಣೆಯನ್ನು ಸಲ್ಲಿಸಿಲ್ಲ . ನಿಪಿ-**63** ಮತ್ತು ನಿಪಿ-**65** ಯಾವ ಇಸವಿಯಲ್ಲಿ ಆಗಿತ್ತು ಎಂದು ನನಗೆ

ಗೊತ್ತಿಲ್ಲ . ಪುತ್ತೂರಿನ **Manila Electricals** ಇದರ ಮಾಲೀಕರಾದ ಮಹಾದೇವ ಶಾಸ್ತ್ರಿ ಮತ್ತು **Civil Engineer Design** ಕೇಶವ ಭಟ್ ಇವರ ಪರಿಚಯ ನನಗೆ ಇಲ್ಲ . ಮೂರನೇ ವಾದಿಯ ಮೂಲಕ ಈ ಮೇಲೆ ಹೇಳಿದ ವ್ಯಕ್ತಿಗಳ ಮೂಲಕ ನಾನು ಯಾವುದೇ ಕೆಲಸವನ್ನು ಮಾಡಿಸಿಲ್ಲ .

ಈ ಹಂತದಲ್ಲಿ ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು .

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಇದೆ.**
**ಪ್ರಧಾನ ಸಿವಿಲ್‌ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ ಬಂಟ್ವಾಳ, ದ.ಕ.**